ಶ್ರೀ ಎಸ್. ಆರ್. ಬೊಮ್ಮಾಯಿ.—ಮಾನ್ಯ ಸದಸ್ಯರು ವೈಯಕ್ತಿಕ ಬಾಕಿ ಪಟ್ಟಿ ಇಲ್ಲದೇ ಸಾಮೂಹಿಕವಾಗಿ ವಸೂಲು ಮಾಡುತ್ತಿದ್ದಾರೆ ಎನ್ನತಕ್ಕಂಥ ಮಾತನ್ನು ಹೇಳಿದ್ದಾರೆ ಅದು ಇಲ್ಲ ಎಂದು ಹೇಳಿದ್ದೇನೆ. ಅವರ ಹತ್ತಿರ ವಿವರಗಳು ಇದ್ದರೆ ಅದನ್ನು ಕೊಟ್ಟರೆ ಅದರ ಬಗ್ಗೆ ವಿಚಾರಣೆಯಂಮ್ನು ಮಾಡಂತ್ತೇನೆ, ತನಿಖೆ ಮಾಡಿ ಆ ರೀತಿ ಏನಾದರೂ ಮಾಡುತ್ತಿದ್ದರೆ ಅವನ್ನು ನಿಲ್ಲಿಸುತ್ತೇನೆ. ಅದರ ಮೇಲೆ ಕ್ರಮ ತೆಗೆದುಕೊಳ್ಳುತ್ತೇನೆಂದು ಹೇಳಿ ವೈಯಕ್ತಿಕ ಪಟ್ಟಿ ಇಲ್ಲದೆ ಲ್ಯಾಂಡ್ ರೆವಿನ್ಯೂವನ್ನು ವಸೂಲು ಮಾಡುವುದಕ್ಕೆ ಬರುತ್ತದೆ. ಸಾಮೂಹಿಕವಾಗಿ ವಸೂಲು ಮಾಡುವುದಂ ತಪ್ಪು. ಆ ರೀತಿ ಏನಾದರೂ ವಸೂಲು ಮಾಡುತ್ತಿದ್ದರೆ ಅದನ್ನು ನಿಲ್ಲಿಸುತ್ತೇನೆ. ಮಾನ್ಯ ಸದಸ್ಯರು ವಿವರಗಳನ್ನು ಕೊಟ್ಟರೆ ಅದರ ಮೇಲೆ ವಿಚಾರಣೆ ಮಾಡಿ ಮತ್ತು ಅದರ ಮೇಲೆ ಕ್ರಮ ತೆಗೆದುಕೊಳ್ಳುತ್ತೇನೆ.

ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ.—ಒಂದು ಎಕರೆಗೆ ೩೦ ರೂಪಾಯಿಗಳ ಪ್ರಕಾರ ಕಂದಾಯ ಹಾಕಿದ್ದಾರೆ. ಹತ್ತು ಸಾವಿರ, ಇಪ್ಪತ್ತು ಸಾವಿರ, ಮೂವತ್ತು ಸಾವಿರ, ನಲವತ್ತು ಸಾವಿರ ಹೀಗೆ ತೆಗೆದುಕೊಳ್ಳುತ್ತಿದ್ದಾರೆ. ಅಲ್ಲಿ ಯಾರ ಮೇಲೂ ವೈಯಕ್ತಿಕ ಪಟ್ಟಿ ಇಲ್ಲ. ವೈಯಕ್ತಿಕ ಪಟ್ಟಿ ಇಲ್ಲದೇ ಇಪ್ಪತ್ತು ಸಾವಿರ ಒಬ್ಬೊಬ್ಬ ರೈತರ ಮೇಲೆ ಹಾಕಿ ಎಕರೆಗೆ ಮೂವತ್ತು ರೂಪಾಯಿ ನಲವತ್ತು ರೂಪಾಯಿ ಮತ್ತು ಒಂದೊಂದು ಕಡೆ ಹತ್ತು ರೂಪಾಯಿ ಪ್ರಕಾರ ಮತ್ತೆ ವಸೂಲು ಮಾಡಿದ್ದಾರೆ. ಈಗಾಗಲೇ ವಸೂಲು ಮಾಡಿರುವುದು ನಿಮ್ಮ ಗಮನಕ್ಕೆ ಬಂದಿಲ್ಲ. ಕೌಟಾ ಎಂಬ ವಿಲೇಜ್‌ನಲ್ಲಿ ಪರ್ಟಿಕ್ಯುಲರ್ ಆಗಿ ಇಂಥದ್ದನ್ನೇ ವಸೂಲು ಮಾಡಿದ್ದಾರೆ. ಇಂಥಾದ್ದು ನಾಲ್ಕೈದು ಹಳ್ಳಿಗಳಲ್ಲಿ ನಡೆದಿದೆ. ಇದರಿಂದ ರೈತರಿಗೆ ಬೇಕಾದಷ್ಟು ತೊಂದರೆಯಾಗಿದೆ.

ಶ್ರೀ ಎಸ್. ಆರ್. ಬೊಮ್ಮಾಯಿ —ಯಾವ ಗ್ರಾಮದಲ್ಲಿ ಆ ರೀತಿ ತೆಗೆದುಕೊಂಡಿದ್ದಾರೆ ಎಂಬ ವಿವರವನ್ನು ಮಾನ್ಯ ಸದಸ್ಯರು ಕೊಡಲಿ, ಅದನ್ನು ಕೂಡಲೇ ನಿಲ್ಲಿಸಲಿಕ್ಕೆ ಹೇಳುತ್ತೇನೆ. ಸಾಮೂಹಿಕವಾಗಿ ವಸೂಲು ಮಾಡುವುದಕ್ಕೆ ಕಾನೂನು ಪ್ರಕಾರ ಬರುವುದಿಲ್ಲ. ಯಾವ ಯಾವ ಹಳ್ಳಿಗಳಲ್ಲಿ ಮಾಡಿದ್ದಾರೆ ಎಂದು ಹೇಳಿದ ಕೂಡಲೇ ಇದರ ಬಗ್ಗೆ ಕ್ರಮ ತೆಗೆದುಕೊಳ್ಳುತ್ತೇನೆ. ಈ ರೀತಿ ವಸೂಲಿರುವುದಂ ಸರಿಯಲ್ಲ ಎಂದು ಅವರಿಗೆ ಆದೇಶ ಕೊಡುತ್ತೇನೆ.

ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ.—ಆ ರೀತಿ ಏನಾದರೂ ವಸೂಲು ಮಾಡಿದ್ದರೆ ಅದನ್ನು ವಾಪಸ್ಸು ಕೊಡಿಸುತ್ತೀರಾ ?

ಶ್ರೀ ಎಸ್. ಆರ್. ಬೊಮ್ಮಾಯಿ.—ಯಾವ ರೀತಿ ಅದು ಸರ್ಕಾರಕ್ಕೆ ಬಾಕಿ ಇದೆಯೋ ಇಲ್ಲವೋ ಅದಂ ಇಲ್ಲದಿದ್ದರೆ ಆ ರೀತಿ ವಸೂಲು ಮಾಡಿದ್ದರೆ ಅದನ್ನು ವಾಪಸ್ಸು ಕೊಡಿಸುತ್ತೇನೆ.

ಅಧ್ಯಕ್ಷರು.—ಶ್ರೀ ಚಂದ್ರಕಾಂತ ಬೆಲ್ಲದ್ ಅವರ ಪ್ರಶ್ನೆ ಮುಂದಕ್ಕೆ ಹೋಗಿದೆ.

ಶ್ರೀ ಚಂದ್ರಕಾಂತ ಜಿ. ಬೆಲ್ಲದ್.— ಇದೇ ಪ್ರಶ್ನೆಯನ್ನು ನಾನು ಮುಂದು ಸಲದಿಂದ ಕೇಳುತ್ತಿದ್ದೇನೆ. ಇದು ಬಹಳ ಗಂಭೀರವಾದ ಪ್ರಶ್ನೆ.

ಅಧ್ಯಕ್ಷರು.—ಈ ಪ್ರಶ್ನೆಗೆ ರಘುಪತಿಯವರು ಪತ್ರ ಬರೆದು ಮುಂದೆ ಉತ್ತರ ಕೊಡುತ್ತೇನೆಂದು ಹೇಳಿದ್ದಾರೆ.

ಶ್ರೀ ಚಂದ್ರಕಾಂತ ಜಿ ಬೆಲ್ಲದ್.—ಇದಕ್ಕೆ ಉತ್ತರವನ್ನು ಈ ಅಸೆಂಬ್ಲಿ ಮುಗಿಯುವುದರೊಳಗಾಗಿ ಯಾದರೂ ಕೊಡಿಸಬೇಕು.

ಅಧ್ಯಕ್ಷರು.—ಆಯಿತು. ಆದಷ್ಟು ಬೇಗ ಕೊಡಿಸೋಣ, ಕುಳಿತುಕೊಳ್ಳಿ.

ಸುಳ್ಯ ತಾಲ್ಲೂಕಿನ ಕುಕ್ಕೆ ಶ್ರೀ ಸುಬ್ರಹ್ಮಣ್ಯ ದೇವಾಲಯದ ವಾರ್ಷಿಕ ಉತ್ಪನ್ನ

೧೫೫೨. ಶ್ರೀ ಕೆ. ಕುಶಾಲ (ಸುಳ್ಯ).—ಮಾನ್ಯ ಧಾರ್ಮಿಕ ಮತ್ತು ದತ್ತಿ ರಾಜ್ಯ ಮಂತ್ರಿಗಳ ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಸುಳ್ಯ ತಾಲ್ಲೂಕಿನ ಕುಕ್ಕೆ ಸುಬ್ರಹ್ಮಣ್ಯ ದೇವಾಲಯದ ವಾರ್ಷಿಕ ಉತ್ಪನ್ನ ಎಷ್ಟು, ಈ ದೇವಾಲಯ ಎಂಡೋಮೆಂಟ್ ಆಗಿ ಎಷ್ಟು ವರ್ಷಗಳಾದವು, ಎಂಡೋಮೆಂಟ್ ಆದಂದಿನಿಂದ ಗರ್ಭಗುಡಿಯ

ತನಕದ ಒಟ್ಟು ಆದಾಯವೆಷ್ಟು. ೧೯೮೪ರ ತನಕದ ಒಟ್ಟು ಖರ್ಚು ಎಷ್ಟು, ಯಾವ ಯಾವ ಬಾಬುಗಳಿಗೆ ಎಷ್ಟು ವೆಚ್ಚ ಮಾಡಲಾಗಿದೆ.

ಅ) ೧೯೮೪ ರಿಂದ ೧೯೮೮ರ ತನಕ ಒಟ್ಟು ಆದಾಯದ ಮೊಬಲಗು ಎಷ್ಟು ? ೧೯೮೪ ರಿಂದ ೧೯೮೮ ರ ತನಕ ಖರ್ಚಾದ ಮೊಬಲಗು ಎಷ್ಟು ?

ಇ) ೧೯೮೪ ರಿಂದ ಕೈಗೊಂಡ ಕಾಮಗಾರಿಗಳನ್ನು ಟೆಂಡರು ಮೂಲಕ ಕೊಡಲಾಗಿದೆಯೆ ? ಇಲ್ಲವೇ ಖಾಸಗೀ ವ್ಯಕ್ತಿಗೆ ಇಷ್ಟ ಬಂದಂತೆ ನೀಡಲಾಗಿದೆಯೇ ? ಹಾಗಿದ್ದಲ್ಲಿ ನಿಯಮದಂತೆ ಟೆಂಡರು ಸ್ವೀಕೃತ ಯಾರು ಯಾರಿಂದ ಆಗಿದೆ. ಇಲ್ಲಿ ಕೇವಲ ಕಂಟ್ರಾಕ್ಟರುದಾರರಿಗೆ ಎಂಡೋಮೆಂಟಿನ ಹಣವನ್ನು ಧರ್ಮದರ್ಶಿಗಳ ಇಚ್ಛಾನುಸಾರ ಕಾಮಗಾರಿಯನ್ನು ಕೈಗೊಂಡ ವ್ಯಯಿಸಲಾದುದು ಸರ್ಕಾರದ ವರಿಗಮನಕ್ಕೆ ಬಂದಿದೆಯೇ ?

ಶ್ರೀ ಕೆ. ಅವುರನಾಥ ಶೆಟ್ಟಿ (ಮುಜರಾಯಿ ಸಚಿವರು).—

ಅ) ಈ ದೇವಾಲಯವು ದಿನಾ ಕ ೩೧-೩-೧೯೨೬ ರಿಂದ ಈ ಇಲಾಖೆಯ ಆಧೀನಕ್ಕೆ ಒಳಪಟ್ಟಿದೆ. (೬೨ ವರ್ಷಗಳಾಗಿದೆ) ೧೯೨೬-೨೭ ನೇ ಸಾಲಿನಿಂದ ೩೧-೩೨ ರ ವರೆಗಿನ ಪರಿಶೋಧಿಸಲ್ಪಟ್ಟ ಲೆಕ್ಕಪತ್ರಗಳನ್ನು ಮಿಲೇ ಮಾಡಲಾಗಿದೆ. ಆದರಿಂದಾಗಿ ಆ ಅವಧಿಯನ್ನು ಬಿಟ್ಟು ೧೯೩೨-೩೩ ರಿಂದ ೧೯೮೪ ರ ತನಕ ಒಟ್ಟು ಆದಾಯ ರೂ ೨,೯೨,೫೩,೭೫೬-೬೭ ಹಾಗೂ ಒಟ್ಟು ಖರ್ಚು ರೂ. ೨,೪೬,೫೯,೪೭೮-೭೭.

ಅ)	ಸಾಲು	ಆದಾಯ	ಖರ್ಚು
	೧೯೪೪-೪೫	ರೂ. ೩೭,೬೩,೫೩೬-೪೦	೨೫,೪೯,೫೬೨-೩೮
	೧೯೪೫-೪೬	೪೭,೦೫,೧೫೮-೬೮	೨೮,೨೪,೦೬೨-೬೩
	೧೯೪೬-೪೭	೫೪.೨೪,೪೮೬-೫೧	೩೯,೧೧,೩೩೧-೯೦

೧೯೮೭-೮೮ ನೇ ಸಾಲಿನ ಅವಧಿ ೩೦-೬-೮೮ ಕ್ಕೆ ಅಂತ್ಯಗೊಳ್ಳುವುದರಿಂದ ವಿವರ ಲಭ್ಯವಿರುವುದಿಲ್ಲ.

ಇ) ೧೯೮೪ ರಿಂದ ಸದರಿ ದೇವಾಲಯಕ್ಕೆ ಸಂಬಂಧಿಸಿದ ಕಾಮಗಾರಿಗಳನ್ನು ಕಾನೂನಿನ ಪ್ರಕಾರ ಟೆಂಡರ್ ಮೂಲಕವೇ ಕೊಡಲಾಗಿದೆ. ಆದರಿಂದಾಗಿ ಖಾಸಗಿ ವ್ಯಕ್ತಿಗಳಿಗೆ ಇಷ್ಟ ಬಂದಂತೆ ನೀಡಿಲ್ಲ. ಹಾಗೂ ಬಂದ ಟೆಂಡರ್‌ಗಳನ್ನು ಆಡಳಿತ ಮಂಡಳಿ ಸ್ವೀಕರಿಸಿರುತ್ತಾರೆ. ಇಲ್ಲಿ ಒಬ್ಬ ಕಂಟ್ರಾಕ್ಟುದಾರರಿಗೆ ಕಾಮಗಾರಿಯನ್ನು ವೊಕ್ಕೇಸರರು ಇಚ್ಛೆಯಂತೆ ಕೊಟ್ಟು ಹಣ ವ್ಯಯ ಮಾಡಿಲ್ಲ.

ಶ್ರೀ ಕೆ. ಕುಶಾಲ. —೧೯೮೩ನೇ ಇಸವಿಯಿಂದ ಸರ್ಕಾರದವರು ಕಂಟ್ರಾಕ್ಟರ್‌ಗಳಿಗೆ ಕಾಮಗಾರಿಗಳನ್ನು ಕೊಡುತ್ತಿದ್ದಾರೆಂದು ತಿಳಿದು ಬಂದಿದೆ.

ಶ್ರೀ ಜಿ ಬಸವಣ್ಣೆಪ್ಪ (ಸಮಾಜ ಕಲ್ಯಾಣ ಸಚಿವರು). —ಇಲ್ಲಿ ಟೆಂಡರ್ ಹಾಕುವ ಪ್ರಶ್ನೆ ಬರುವುದಿಲ್ಲ ಯಾರಿಂದ ಕಡಿಮೆ ಟೆಂಡರ್ ಬರುತ್ತದೆಯೋ ಅವರಿಗೆ ಕಾನೂನು ಪ್ರಕಾರ ಕೊಡುತ್ತಿದ್ದೇವೆ. ೧೯೮೩ನೇ ಇಸವಿಯಿಂದ ಅಲ್ಲಿ ತುಂಬಾ ಕಾಮಗಾರಿಗಳು ಆಗಿವೆ.

ಅಧ್ಯಕ್ಷರು.—ಪ್ರಶ್ನೆ ಸಂಖ್ಯೆ ೪೯೬(೨೦೬೩)ಕ್ಕೆ ಟೈಮ್ ಕೇಳಿದ್ದಾರೆ, ಮುಂದಿನ ಸಾರಿ ಉತ್ತರ ಕೊಡಿಸುತ್ತೇನೆ.